ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

# ವಿದ್ಯಾವರಣ

ಸ್ಥಾಪನೆ- 1962

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/01/2026 : www.sjjes.ac.in : info@sjjes.ac.in : +91.8192.277698

## ಅರುಂಧತಿ ರಮೇಶ್ ಸಾಹಿತ್ಯ ಲೋಕದ ನಕ್ಷತ್ರ



ಹಿರಿಯೂರಿನ ದಿ.ಎನ್.ಎಸ್. ತಿಪ್ಪೇಸ್ವಾಮಿ ಹಾಗೂ ಲಲಿತಮ್ಮ ದಂಪತಿ ಪುತ್ರಿಯಾಗಿ ಜೂನ್ ೦೯ ೧೯೫೦ರಂದು ಜನಿಸಿದರು. ತಂದೆ ತಾಯಿಯ ಶಿಸ್ತು ಸಂಸ್ಕಾರವನ್ನು ಮೈಗೂಡಿಸಿಕೊಂಡ ಅರುಂಧತಿ ಸಾಹಿತ್ಯದಲ್ಲಿ ಅಪಾರ ಆಸಕ್ತಿ ಹೊಂದಿದ್ದ ತಮ್ಮ ತಾತ ಪಂಪಣ್ಣನವರಿಂಗ ಪ್ರೇರೇಪಣೆ ಪಡೆದು ಎಳೆಯ ವಯಸ್ಸಿನಿಂದಲೇ ಸಾಹಿತ್ಯ ರಚನೆ ಮಾಡತೊಡಗಿದರು. ಪ್ರೌಢಶಾಲಾ ಶಿಕ್ಷಣವನ್ನು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ಬಿ.ಎಸ್ಸಿ. ಪದವಿಯನ್ನು ಧರಾಮ ಕಾಲೇಜಿನಲ್ಲಿ ಪಡೆದು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನಾರಂಭಿಸಿದರು. ಸದಾ ಮಕ್ಕಳ ಪುರೋಭಿವೃದ್ಧಿಗೆ ಚಿಂತಿಸುತ್ತಿದ್ದ ಅರುಂಧತಿ ವಿದ್ಯಾರ್ಥಿಗಳನ್ನು ತನ್ನ ಮಕ್ಕಳಂತೆ ನೋಡುತ್ತಾ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದರು. ವಿಜ್ಞಾನದ ಪ್ರಯೋಗಗಳು ವಸ್ತು ಪ್ರದರ್ಶನ ವಿಚಾರ ಸಂಕೀರಣ ನಾಟಕ ಮುಂತಾದ ಕಾರ್ಯಕ್ರಮಗಳಿಗೆ ಜಿಲ್ಲೆ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಕರೆದೊಯ್ದು ಬಹುಮಾನ ಪಡೆಯುವಂತೆ ಮಾಡುತ್ತಿದ್ದರು. ಪರಿಸರ ಕಾಳಜಿ ಬಗೆಗಿನ ನಾಟಕಗಳನ್ನು ಬರೆದು ಮಕ್ಕಳಿಂದ ನಾಟಕ ಮಾಡಿಸಿ ಹೆಗ್ಗಳಿಕೆ ಅವರದ್ದು. ೧೯೮೦ರಲ್ಲಿ ಸಾಹಿತಿ ಬಿ.ಎಂ. ರಮೇಶ್ ಅವರನ್ನು ಕೈಹಿಡಿದು ಈರ್ವರೂ ಕೃತಿ ರಚನೆಯಲ್ಲಿಯೂ ಸಂಗಾತಿಗಳಾದರು.

ಹಿರಿಯ ಸಾಹಿತಿ, ಸಂಘಟಕಿ, ಸಂಶೋಧನಾಕಾರ್ತಿ ಟಿ. ಗಿರಿಜಾ ಅವರ ಒಡನಾಟ ಡಾ. ಎಂ.ಜಿ.ಈಶ್ವರಪ್ಪನವರ ಮಾರ್ಗದರ್ಶನ ಮತ್ತು ಸಾಹಿತ್ಯಿಕ ಗೆಳತಿಯರ ಸಹವಾಸದಿಂದ ಅನೇಕ ಕೃತಿಗಳನ್ನು ರಚಿಸಿ ಶ್ರೇಷ್ಠ ಸಾಹಿತಿಯಾದರು. ಅವರೊಬ್ಬ ಸೃಜನಶೀಲ ಸಾಹಿತಿಯಾಗಿದ್ದು ಅವರ ಸಾಹಿತ್ಯ ಪ್ರೌಢಮಟ್ಟದ್ದಾಗಿದ್ದುದರಿಂದ ಸರಳವಾಗಿ ಅರ್ಥವಾಗುವುದಿಲ್ಲ ಎಂದು ಸಾಹಿತಿ ಟಿ. ಗಿರಿಜಾರವರು ಹೇಳಿದ್ದೂ ಇದೆ. ಶ್ರೇಷ್ಠ ಸಾಹಿತಿ ಶ್ರೀ ಜಯಂತ ಕಾಯ್ಕಿಣಿಯವರು ಹಾಗೂ ಹಲವಾರು ಸಾಹಿತಿಗಳು ಇವರ ಸಾಹಿತ್ಯವನ್ನು ಬಹುವಾಗಿ ಮೆಚ್ಚಿಕೊಂಡಿದ್ದರು.

ಹೆಬ್ಬಾಳು ಘಟಕದ ಸಿರಿಗನ್ನಡ ವೇದಿಕೆಯ ಅಧ್ಯಕಷೆಯಾಗಿ ನಂತರ ಬೆಂಗಳೂರು ನಗರದ ಸಿರಿಗನ್ನಡ ವೇದಿಕೆ ಅಧ್ಯಕ್ಷೆಯಾಗಿಯೂ ಕಾರ್ಯ ನಿರ್ವಹಿಸಿದ ಕೀರ್ತಿ ಅವರದು. ಅರುಂಧತಿಯವರು ಸಿನಿಮಾ ಸಿರಿ ಸಾಂಸ್ಕೃತಿಕ ಸಂಸ್ಥೆಯ ವತಿಯಿಂದ ಅನೇಕ ನಟ ನಟಿಯರನ್ನು ಸಂದರ್ಶಿಸಿ ಲೇಖನ ಬರೆದಿದ್ದಾರೆ. ಇನ್ನೊಂದು ಹೊ ಕವನ ಸಂಕಲನ ಪ್ರಕಟಿಸಬೇಕೆಂಬ ಅಕಾಂಕ್ಷೆಯನ್ನೂ ಹೊಂದಿದ್ದರು. ಅವರ ನೂರಾರು ಬಿಡಿ ಲೇಕಣಗಳು ಸ್ಥಳೀಯ ಪತ್ರಿಕೆ ಮಾ ಪತ್ರಿಕೆ ಹಾಗೂ ವಾರ ಪತ್ರಿಕೆಗಳಲ್ಲೂ ಪ್ರಕಟಗೊಂಡಿವೆ.

## ರಾಷ್ಟ್ರೀಯ ಮಾನವ ಹಕ್ಕುಗಳ ದಿನ.

ಮಾನವ ಹಕ್ಕುಗಳ ದಿನವನ್ನು ಅಂತರಾಷ್ಟ್ರೀಯ ಸಮುದಾಯವು ಪ್ರತಿ ವರ್ಷ ಡಿಸೆಂಬರ್ 10 ರಂದು ಆಚರಿಸಲಾಗುತ್ತದೆ. ಇದು 1948ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಅಂಗೀಕರಿಸಿದ ದಿನವನ್ನು ಸ್ಮರಿಸುತ್ತದೆ. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯು ನಾವೆಲ್ಲರೂ ಅರ್ಹರಾಗಿರುವ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ವ್ಯಾಪಕ ಶ್ರೇಣಿಯನ್ನು ರೂಪಿಸುತ್ತದೆ. ಇದು ರಾಷ್ಟ್ರೀಯತೆ, ವಾಸಸ್ಥಳ, ಲಿಂಗ, ರಾಷ್ಟ್ರೀಯ ಅಥವಾ ಜನಾಂಗೀಯ ಮೂಲ ಧರ್ಮ, ಭಾಷೆ ಅಥವಾ ಯಾವುದೇ ಇತರ ಸ್ಥಾನಮಾನದ ಆಧಾರದ ಮೇಲೆ ವ್ಯತ್ಯಾಸವಿಲ್ಲದೆ ಎಲ್ಲಡೆ ಪ್ರತಿಯೊಬ್ಬ ವ್ಯಕ್ತಿಯ ಹಕ್ಕುಗಳನ್ನು ಖಾತರಿಪಡಿಸುತ್ತದೆ. ಈ ದಿನ ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಮಾನವ ಹಕ್ಕುಗಳ ಬಗ್ಗೆ ಅರಿವು ಮೂಡಿಸಲಾಯಿತು.

# ಶ್ರೀಮತಿ ವಾಗ್ದೇವಿಯವರಿಗೆ ಶಿಕ್ಷಣ ಶಿಲ್ಪಿ ಡಾ. ಎಂ.ಎಸ್. ಶಿವಣ್ಣ ಪ್ರಶಸ್ತಿ




ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿ ಮತ್ತು ಅದೇ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಇವರು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ತಮ್ಮ ಸೇವಾ ಅವಧಿಯಲ್ಲಿ ಸಲ್ಲಿಸಿದ ಸೇವೆಗಾಗಿ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಇವರ ಸೇವಾ ಹಿರಿತನವನ್ನು ಪರಿಗಣಿಸಿ ಮುಖ್ಯ ಉಪಾಧ್ಯಾಯರಾಗಿ ಬಡ್ತಿ ನೀಡಲಾಯಿತು. ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಇವರ ಸೇವಾ ಅವಧಿಯಲ್ಲಿ ಸಂಸ್ಥೆಗೆ ಸಲ್ಲಿಸಿದ ಸೇವೆಯನ್ನು ಹಾಗೂ ಅವರಲ್ಲಿ ಇರುವಂತಹ ಶೈಕ್ಷಣಿಕ ಜ್ಞಾನವನ್ನು ಪರಿಗಣಿಸಿ ಸಂಸ್ಥೆ ಅವರನ್ನು ಶೈಕ್ಷಣಿಕ ಸಲಹೆಗಾರರನ್ನಾಗಿ ನೇಮಕ ಮಾಡಲಾಯಿತು. ಈ ರೀತಿ ಅಪಾರ ಶೈಕ್ಷಣಿಕ ಸೇವೆಯನ್ನು ಪರಿಗಣಿಸಿ ನಗರದ ಸಿದ್ದಗಂಗಾ ವಿದ್ಯಾಸಂಸ್ಥೆಯವರು ಪ್ರತಿ ವರ್ಷ ಕೊಡಲ್ಪಡುವ ಶಿಕ್ಷಣ ಶಿಲ್ಪಿ ಡಾ.ಎಂ.ಎಸ್. ಶಿವಣ್ಣ ಪ್ರಶಸ್ತಿ ೨೦೨೫ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

# ಪ್ರವಾಸದ ಕುರಿತು ಒಂದು ಅನಿಸಿಕೆ.




ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಿಂದ ದಿನಾಂಕ:26.12.2025 ಶುಕ್ರವಾರದಂದು ಪ್ರವಾಸಕ್ಕೆ ಹೊರಟೆವು. ನಾವು ಬೆಳಗ್ಗೆ 1:45ಕ್ಕೆ ಸರಿಯಾಗಿ ದಾವಣಗೆರೆಯಿಂದ ಪ್ರವಾಸಕ್ಕೆ ಹೊರಟು ನಮ್ಮ ಮೊದಲ ಭೇಟಿಯ ಸ್ಥಳ ಕನ್ನಡದ ಹಿರಿಯ ಸಾಹಿತಿಯಾದ ಕುವೆಂಪು ಅವರ ಹುಟ್ಟೂರಾದ ಕುಪ್ಪಳ್ಳಿಗೆ ಬೆಳಗ್ಗೆ 6:00 ಸಮಯಕ್ಕೆ ತಲುಪಿದೆವು. ಅಲ್ಲಿನ ಹಸಿರು ವಾತಾವರಣದ ಪ್ರಕೃತಿಯ ವಿಸ್ಮಯದ ಸೊಬಗನ್ನು ಮಕ್ಕಳಿಗೆ ತೋರಿಸಿಕೊಂಡು ಬೆಳಗಿನ ಉಪಹಾರ ಸೇವಿಸಿ ಕವಿ ಮನೆಯ ಸುಂದರ ನೋಟವನ್ನು ಮಕ್ಕಳಿಗೆ ತೋರಿಸಿದೆವು. ಅಲ್ಲಿಂದ ಬಾಳೆಹೊನ್ನೂರು ಮಠಕ್ಕೆ ಭೇಟಿ ಮಾಡಿ ನಂತರ ಸಿರಿಮನೆ ಫಾಲ್ಸ್ ನೋಡಿಕೊಂಡು, ಶೃಂಗೇರಿಯ ಶಾರದಾಂಬ ದೇವಾಲಯ ನೋಡಿಕೊಂಡು, ಧರ್ಮಸ್ಥಳದ ಶ್ರೀ ಮಂಜುನಾಥ ದೇವಾಲಯದ ದರ್ಶನವನ್ನು ಮುಗಿಸಿ ಪ್ರಸಾದವನ್ನು ಸ್ವೀಕರಿಸಿದೆವು. ಅಂದು ರಾತ್ರಿ ಅಲ್ಲಿಯೇ ವಸತಿ ಮಡಿದೆವು. ಬೆಳಗ್ಗೆ ಅಲ್ಲಿಂದ ನೇರವಾಗಿ ಉಪಹಾರ ಸೇವಿಸಿಕೊಂಡು ಶನಿವಾರದಂದು ಶ್ರೀ ಕೆ ಶಿವರಾಂ ಕಾರಂತ್ ವಿಜ್ಞಾನ ಕೇಂದ್ರಕ್ಕೆ ಭೇಟಿ ಮಾಡಿ ಅಲ್ಲಿನ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಮಕ್ಕಳು ಗ್ರಹಿಸಿ ಹಲವಾರು ವಿಷಯಗಳನ್ನು ತಿಳಿದುಕೊಂಡರು. ನಂತರ ಅಲ್ಲಿನ ಬಾಟನಿಕಲ್ ಗಾರ್ಡನ್ನಲ್ಲಿ ಮಕ್ಕಳು ಸ್ವಲ್ಪ ಹೊತ್ತು ಆಟವಾಡಿ ಆನಂದಿಸಿದರು. ಅಲ್ಲಿಂದ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಭೇಟಿ ಮಾಡಿ ದಿವ್ಯ ದರ್ಶನವನ್ನು ಪಡೆದು, ನಂತರ ಅಲ್ಲಿಂದ ಖದ್ರಿ ಶ್ರೀ ಮಂಜುನಾಥನ ಮೂಲ ಸ್ಥಳಕ್ಕೆ ಭೇಟಿ ನೀಡಿದೆವು. ನಂತರ ಮಂಗಳಾದೇವಿ ದೇವಾಲಯ ನೋಡಿಕೊಂಡು, ಮೂಡುಬಿದ್ರೆಯ ಸಾವಿರ ಕಂಬದ ಬಸದಿಗೆ ಭೇಟಿ ನೀಡಿದವು. ಅಲ್ಲಿಂದ ಶ್ರೀ ಶಂಕರನಾರಾಯಣ ದೇವಾಲಯ ಉಡುಪಿ (ಕೋಡ) ಊರನ್ನು ನೋಡಿಕೊಂಡು ಅಲ್ಲಿಯ ವಸತಿ ವ್ಯವಸ್ಥೆ ಪಡೆದು, ನಂತರ ಭಾನುವಾರದಂದು ಮಲ್ಪೆ ಬೀಚ್ ನೋಡಿಕೊಂಡು ಉಪಹಾರ ಸೇವಿಸಿದೆವು. ಉಡುಪಿಯ ಶ್ರೀ ಕೃಷ್ಣ ದೇವಾಲಯ ದರ್ಶನ ಮಾಡಿ ಅಲ್ಲಿಂದ ನೇರವಾಗಿ ಕುಂಭಾಶಿಯ ಶ್ರೀ ಗಣೇಶನ ದರ್ಶನವನ್ನು ಮತ್ತು ಹರಿಹರ ಗುರು ದೇವಾಲಯ ನೋಡಿ ಅಲ್ಲೇ ಮಧ್ಯಾಹ್ನದ ಊಟವನ್ನು ಮಾಡಿದೆವು. ಸಂಜೆ ಮುರುಡೇಶ್ವರಕ್ಕೆ ಭೇಟಿ ನೀಡಿ ಅಲ್ಲಿನ ಸಮುದ್ರದ ಸುಂದರ ಸೊಬಗು ಮತ್ತು ಶ್ರೀ ಮುರುಡೇಶ್ವರನ ದರ್ಶನ ಮಾಡಿಕೊಂಡು ಅಲ್ಲಿಂದ ಇಡುಗುಂಜಿಯ ಶ್ರೀ ಗಣೇಶನ ದರ್ಶನವನ್ನು ಮಾಡಿ ಅಲ್ಲಿಂದ ಹೊರಟೆವು. ನಂತರ ಶಿರಸಿಯಲ್ಲಿ ರಾತ್ರಿ ಊಟ ಸೇವಿಸಿಕೊಂಡು ಅಲ್ಲಿಂದ ನೇರವಾಗಿ ದಾವಣಗೆರೆಗೆ ಮೂರು ಗಂಟೆಗೆ ಸರಿಯಾಗಿ ಬಂದು ತಲುಪಿದೆವು. ಈ ಒಂದು ಪ್ರವಾಸದಿಂದ ಎಲ್ಲಾ ಮಕ್ಕಳಿಗೂ ಮತ್ತು ಶಿಕ್ಷಕರಿಗೂ ವಿವಿಧ ರೀತಿಯ ವಿಷಯಗಳನ್ನು ತಿಳಿದುಕೊಳ್ಳಲು ದೇವಾಲಯಗಳ ವಿಶೇಷತೆ ತಿಳಿದುಕೊಳ್ಳಲು ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯದ ಬಗ್ಗೆ ತಿಳಿದುಕೊಳ್ಳಲು ಅವಕಾಶ ದೊರಕಿತು. ಶೈಕ್ಷಣಿಕ ಪ್ರವಾಸದಿಂದ ಎಲ್ಲರಿಗೂ ಒಂದು ಉತ್ತಮವಾದ ಜ್ಞಾನಾರ್ಜನೆ ದೊರಕಿತು.

# ಸಾವಿತ್ರಿಬಾಯಿ ಪುಲೆ ಅವರ ಜನ್ಮದಿನಾಚರಣೆ



ಸಾವಿತ್ರಿಬಾಯಿ ಪುಲೆ ಅವರು ಶಿಕ್ಷಕಿ, ಸಂಚಾಲಕಿ, ಮುಖ್ಯೋಪಾಧ್ಯಾಯನಿ, ಸಾಮಾಜಿಕ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಭಾರತದ ಮೊಟ್ಟಮೊದಲ ಶಿಕ್ಷಕಿ, ದಣಿವರಿಯದ ಸತ್ಯಶೋಧಕಿ ಮತ್ತು ಆಧುನಿಕ ಶಿಕ್ಷಣದ ತಾಯಿ. ಇವರ ವೇಷಭೂಷಣವು ತುಂಬಾ ಸರಳವಾಗಿತ್ತು. ಗಾದೆ ಸೀರೆಯನ್ನೇ ಅವರು ಧರಿಸುತ್ತಿದ್ದರು. ಇವರು ದಿ:03.01.1831 ರಲ್ಲಿ ಸತಾರ ಜಿಲ್ಲೆಯ ನೈಗಾನ್ನಲ್ಲಿ ಹುಟ್ಟಿದರು. ತಂದೆ ನೇವಸೇ ಪಾಟೇಲ್. ಬಾಲ್ಯದಲ್ಲಿಯೇ ಸಾವಿತ್ರಿಬಾಯಿ ಪುಲೆ ಅವರು ಜ್ಯೋತಿಬಾಪುಲೆ ಅವರನ್ನು ಲಗ್ನವಾದರು . ಅವರು ಯಶಸ್ಸು ಶ್ರೇಯಸ್ಸಿನ ವಿಕ್ರಮ ಪಾಲು ಜ್ಯೋತಿಬಾಪುಲೆ ಅವರದಾಗಿತ್ತು. ಸ್ತ್ರೀ ಶಿಕ್ಷಣವನ್ನು ತೆರೆದ ಕೀರ್ತಿ ಜ್ಯೋತಿಬಾಪುಲೆ ಅವರಿಗೆ ಸಲ್ಲುತ್ತದೆ. ಇಂದು ಭಾರತದ ಮಹಿಳೆಯರ ಸಮಾಜದ ಎಲ್ಲಾ ಕ್ಷೇತ್ರದಲ್ಲಿ ಸಮಾನತೆಯ ಹಕ್ಕಿಗೆ ಕಾರಣರಾದರು ಮಾತೇ ಸಾವಿತ್ರಿಬಾಯಿ ಪುಲೆ. ಇವರು ಸಮಾಜದ ಅನಿಷ್ಟ ಪದ್ಧತಿಗಳಾದ ಬಾಲ್ಯವಿವಾಹ, ಸತಿಸಹಗಮನ ಪದ್ಧತಿ, ಕೇಶಮುಂಡನೆ ವಿರುದ್ಧ ಹೋರಾಡಿ ಮಹಿಳೆಯರಿಗೋಸ್ಕರ ಪ್ರಥಮವಾಗಿ ಶಾಲೆಗಳು, ಅಬಲಾಶ್ರಮ ಸ್ಥಾಪನೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇವರ ಸಾಧನೆಯನ್ನು ಮೆಚ್ಚಿ ಬ್ರಿಟಿಷ್ ಸರ್ಕಾರ ಇವರಿಗೆ ಇಂಡಿಯಾಸ್ ಫಸ್ಟ್ ಲೇಡಿ ಟೀಚರ್ ಎಂಬ ಬಿರುದು ಕೊಟ್ಟಿದೆ. ಹಲವಾರು ರೀತಿಯಲ್ಲಿ ಸಾಧನೆ ಮಾಡಿದ ಸಾವಿತ್ರಿಬಾಯಿ ಪುಲೆ ಅವರ ಜನ್ಮದಿನಾಚರಣೆ ಪ್ರಯುಕ್ತ ಅವರ ಜೀವನ ಮತ್ತು ಅವರು ನೀಡಿದ ಕೊಡುಗೆಯ ಬಗ್ಗೆ ಮಕ್ಕಳಿಗೆ ತಿಳಿಸಲಾಯಿತು.

# ಜಯಕಿರಣ ಮತ್ತು ಹೊಂಗಿರಣ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಸಮಾರೋಪ ಸಮಾರಂಭ





ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ದಿನಾಂಕ:22.12.2025 ರಂದು ಜಯಕಿರಣ ಮತ್ತು ಹೊಂಗಿರಣ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ದಾರುಕೇಶ್ ಬಿ ಎಂ ಹಿರಿಯ ಉಪನ್ಯಾಸಕರು ಡಯಟ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಕ್ಕಳಿಗೆ ಪ್ರಚೋದನೆಯ ಮಾತುಗಳನ್ನಾಡಿದರು. ಮಕ್ಕಳು ಶ್ರದ್ಧೆಯಿಂದ ಓದುವುದರ ಮೂಲಕ ಉತ್ತಮ ಅಂಕಗಳನ್ನ ಪಡೆಯಬೇಕು, ಮತ್ತು ಮನೆಯಲ್ಲಿ ಗುರುಹಿರಿಯರಿಗೆ ಗೌರವವನ್ನು ಕೊಡಬೇಕು ಮತ್ತು ತಂದೆ ತಾಯಿಯನ್ನು ಗೌರವಿಸಬೇಕು. ಪೋಷಕರು ಪ್ರತಿದಿನ ಸಾಯಂಕಾಲ ಒಂದು ಗಂಟೆ ಮನೆಯಲ್ಲಿ ಮೊಬೈಲ್ ಬಳಕೆ ಹಾಗೂ ಟಿವಿ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಆ ಒಂದು ಗಂಟೆ ಮಕ್ಕಳು ಓದಿನ ಕಡೆಗೆ ಮತ್ತು ಪೋಷಕರು ತಮ್ಮ ಮಕ್ಕಳನ್ನು ಓದಿಸುವುದರ ಜೊತೆಗೆ ತಮ್ಮ ಸಮಯವನ್ನು ಕಳೆದಾಗ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಕಿವಿ ಮಾತನ್ನ ಹೇಳಿದರು. ಈ ಒಂದು ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಯುತ ಮನೋಹರ್ ಎಸ್ ಚಿಗಟೇರಿಯವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಕ್ಕಳಿಗೆ ಉತ್ತಮ ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತರುವುದರ ಜೊತೆಗೆ ಸಮಾಜದಲ್ಲಿ ಉತ್ತಮ ಹೆಸರನ್ನು ಗಳಿಸಬೇಕು ಹಾಗೂ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಶುಭವನ್ನು ಕೋರುವುದರ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು ತುಂಬಾ ಮುಖ್ಯ ಎಂದು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್ ನಾಗರಾಜ್ ಅವರು ವಹಿಸಿದ್ದರು. ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಪ್ರಾಥಮಿಕ ಶಾಲೆಯ

ಮುಖ್ಯೋಪಾಧ್ಯಾಯನಿಯರಾದ ಶ್ರೀಮತಿ ಶೈಲಜಾ ಎಸ್ ಎಂ ಹಾಗೂ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಆರ್ ವಾಗ್ದೇವಿ ಮತ್ತು ಶ್ರೀ ಎಂ ಟಿ ಮಳಗಿ, ಸಂಸ್ಥೆಯ ಸದಸ್ಯರಾದ ಶ್ರೀಮತಿ ವಿಜಯಾ ಹಿರೇಮಠ್ ಹಾಗೂ ಶ್ರೀ ಬಿ ಎಸ್ ಹಿರೇಮಠ್ ಉಪಸ್ಥಿತರಿದ್ದರು.

## ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ - ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆ, 2025–26




ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆಯಲ್ಲಿ 2025-26ನೇ ಸಾಲಿನ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭವು ದಿನಾಂಕ 24-12-2025 ರಂದು ಶಾಲಾ ಸಭಾಂಗಣದಲ್ಲಿ ವಿಜೃಂಭಣೆಯಿಂದ ನೆರವೇರಿತು .ಈ ಸಂದರ್ಭದಲ್ಲಿ ವರ್ಷಪೂರ್ತಿ ವಿದ್ಯಾರ್ಥಿ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ವಿವಿಧ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಸಿಂಧೂ ಜಿ ೧೦ನೇ ತರಗತಿ ವಿದ್ಯಾರ್ಥಿನಿಯಿಂದ ಮಂಡಿಸಲಾಯಿತು. ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಹಾಗು ಉತ್ತಮ ಕಾರ್ಯನಿರ್ವಹಣೆ ತೋರಿದ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ಹಾಗೂ ಪ್ರಮಾಣಪತ್ರಗಳನ್ನು ಶ್ರೀ ಮನೋಹರ ಎಸ್ , ಚಿಗಟೇರಿ, ಕಾರ್ಯದರ್ಶಿ,

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ) ದಾವಣಗೆರೆ ಇವರು ವಿತರಿಸಿ ಬಹುಮಾನ ವಿತರಕರ ನುಡಿಗಳನ್ನು ಆಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಪ್ರೊ॥ ಬಾತಿ ಬಸವರಾಜ್ ಶೈಕ್ಷಣಿಕ ನಿರ್ದೇಶಕರು ಧವನ್ ಕಾಲೇಜು, ದಾವಣಗೆರೆ ಅವರು ಉಪಸ್ಥಿತರಿದ್ದು, ವಿದ್ಯಾರ್ಥಿನಿಯರಿಗೆ ಶಿಸ್ತು, ನಾಯಕತ್ವ ಹಾಗೂ ಜವಾಬ್ದಾರಿಯ ಮಹತ್ವದ ಕುರಿತು ಪ್ರೇರಣಾದಾಯಕ ಸಂದೇಶ ನೀಡಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಮುಖ್ಯೋಪಾಧ್ಯಯರಾದ ಶ್ರೀ ಜಿ. ಸುರೇಶನಾಯ್ಕ ರವರು ವಹಿಸಿ ಅಧ್ಯಕ್ಷರ ನುಡಿಗಳನ್ನು ಆಡಿದರು. ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಕಾರ್ಯಕ್ರಮದ ಅಂತ್ಯದಲ್ಲಿ ಶಾಲಾ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.ಕಾರ್ಯಕ್ರಮವು ವಂದನಾ ಭಾಷಣದೊಂದಿಗೆ ಸಮಾರೋಪಗೊಂಡಿತು.

# ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಏಕದಿನ ಪ್ರವಾಸ - ಕಾಂತೇಶ್ವರ ದೇವಾಲಯ, ಕಾಗಿನೆಲೆ ಹಾಗೂ ಅಗಡಿ ತೋಟಕ್ಕೆ ಭೇಟಿ.





ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆಯ ವತಿಯಿಂದ ವಿದ್ಯಾರ್ಥಿನಿಯರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಜ್ಞಾನವನ್ನು ವೃದ್ಧಿಸುವ ಉದ್ದೇಶದಿಂದ ಕಾಂತೇಶ್ವರ ದೇವಾಲಯ, ಕಾಗಿನೆಲೆ ಹಾಗೂ ಅಗಡಿ ತೋಟಕ್ಕೆ ಏಕದಿನ ಪ್ರವಾಸವನ್ನು ಹಮ್ಮಿಕೊಳ್ಳಲಾಯಿತು.

ಪ್ರವಾಸದ ಮೊದಲ ಹಂತದಲ್ಲಿ ವಿದ್ಯಾರ್ಥಿನಿಯರು ಕಾಂತೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವಾಲಯದ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವದ ಕುರಿತು ಶಿಕ್ಷಕರಿಂದ ಮಾಹಿತಿ ಪಡೆದರು. ನಂತರ ಕಾಗಿನೆಲೆ ಪ್ರವಾಸ ಕೈಗೊಂಡು ಅಲ್ಲಿನ ಐತಿಹಾಸಿಕ ಹಿನ್ನೆಲೆ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳ ಬಗ್ಗೆ ತಿಳಿದುಕೊಂಡರು.ಪ್ರವಾಸದ ಅಂತಿಮ ಹಂತವಾಗಿ ಅಗಡಿ ತೋಟಕ್ಕೆ ಭೇಟಿ ನೀಡಿದ ವಿದ್ಯಾರ್ಥಿನಿಯರು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುವುದರ ಜೊತೆಗೆ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಅರಿವು ಪಡೆದರು. ಈ ಪ್ರವಾಸವು ವಿದ್ಯಾರ್ಥಿನಿಯರಿಗೆ ಪಾಠ್ಯೇತರ ಜ್ಞಾನವನ್ನು ನೀಡುವುದರ ಜೊತೆಗೆ ಸಂತಸ ಹಾಗೂ ಮನೋರಂಜನೆಯ ಅನುಭವವನ್ನು ನೀಡಿತು ಈ ಏಕದಿನ ಪ್ರವಾಸದಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಪ್ರವಾಸವು ಶಿಸ್ತುಬದ್ಧವಾಗಿ ಹಾಗೂ ಯಶಸ್ವಿಯಾಗಿ ಪ್ರವಾಸವನ್ನು ಮುಗಿಸಿ ಹಿಂದಿರುಗಲಾಯಿತು .

# ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆ - ಸಾವಿತ್ರಿಬಾಯಿ ಫುಲೆ ಜಯಂತಿ



ಜನವರಿ 3, 2026ರ ಶನಿವಾರದಂದು ಮಹಾನ್ ಸಮಾಜ ಸುಧಾರಕಿ, ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರ 195ನೇ ಜಯಂತಿಯನ್ನು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ಭಕ್ತಿಭಾವದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.ಕಾರ್ಯಕ್ರಮದ ಅಂಗವಾಗಿ ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಾಯಿತು.ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕರು ಸಾವಿತ್ರಿಬಾಯಿ ಫುಲೆ ಅವರು ಸ್ತ್ರೀ ಶಿಕ್ಷಣ, ಸಾಮಾಜಿಕ ಸಮಾನತೆ ಹಾಗೂ ಶೋಷಿತ ವರ್ಗಗಳಿಗೆ ನೀಡಿದ ಅಪಾರ ಕೊಡುಗೆಗಳ ಕುರಿತು ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡಿದರು.ಸ್ತ್ರೀ ಶಿಕ್ಷಣದ ಮಹತ್ವ ಹಾಗೂ ಸಮಾಜ ಸುಧಾರಣೆಯ ಕುರಿತಾಗಿ ಅವರ ಆದರ್ಶಗಳು ಇಂದಿಗೂ ಪ್ರಸ್ತುತವೆಂದು ಶಿಕ್ಷಕರು ತಿಳಿಸಿದರು.ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಜಯಂತಿ ಆಚರಣೆ ಪ್ರೇರಣಾದಾಯಕವಾಗಿ ಹಾಗೂ ಶಿಸ್ತುಬದ್ಧವಾಗಿ ನೆರವೇರಿತು.

# ಗುರುಬಸಮ್ಮ ವಿ.ಚಿಗಟೇರಿ ಹಿರಿಯ ಪ್ರಾಥಮಿಕ & ಪ್ರೌಢಶಾಲೆಯ ವಾರ್ಷಿಕೋತ್ಸವ ಸಮಾರಂಭ



ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುವ ಶಿವಣ್ಣ ಚಿಗಟೇರಿ ಶಿಶುವಿಹಾರ, ಶ್ರೀಮತಿ ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ (ಆಂಗ್ಲ ಮಾಧ್ಯಮ) ಇವುಗಳ ಸಂಯುಕ್ತಾಶ್ರಯದಲ್ಲಿ ನಡೆದ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ ೨೦೨೫–೨೬ ಸಾಲಿನ ಕಾರ್ಯಕ್ರಮ ದಿನಾಂಕ ೨೩/೧೨/೨೦೨೫ ರ ಮಂಗಳವಾರ ನಡೆದಿದ್ದು ಬೆಳಿಗ್ಗೆ ೯ ಗಂಟೆಗೆ ಸಭಾ ಕಾರ್ಯಕ್ರಮ ಹಾಗೂ ಸಂಜೆ ೦೬ಕ್ಕೆ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಬೆಳಗಿನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಹೆಚ್. ನಿಂಗಪ್ಪ ಮುಖ್ಯೋಪಾಧ್ಯಾಯರು ಜಿ.ವಿ.ಸಿ.ಹೆಚ್.ಎಸ್. ಇವರು ವಹಿಸಿದ್ದರು. ಹಾಗೆಯೇ ಬಹುಮಾನ ವಿತರಕರಾಗಿ ಶ್ರೀಮತಿ ಶಶಿಕಲಾ ಎಮ್. ಹಿರಿಯ ಉಪನ್ಯಾಸಕರು ಡಯಟ್. ದಾವಣಗೆರೆ ಇವರು ಆಗಮಿಸಿದ್ದರು. ಸಮಾರೋಪ ಭಾಷಣವನ್ನು ನೆರವೇರಿಸಲು ಶ್ರೀ ನಂಜುಂಡಸ್ವಾಮಿ ಇವರ ಅನುಪ ಸ್ಥಿತಿಯಲ್ಲಿ ಶಮೀಮ್ ಉನ್ನೀಸಾ ಆಗಮಿಸಿದ್ದರು. ಹಾಗೆಯೇ ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಮನೋಹರ್ ಎಸ್. ಚಿಗಟೇರಿ. ಶೈಕ್ಷಣಿಕ ಸಲಹೆಗಾರರಾದ ಎಂ.ಟಿ. ಮಳಗಿ ವಾಗ್ದೇವಿ ಆರ್. ಮತ್ತು ಸಹೋದರ ಶಾಲೆಗಳ ಮುಖ್ಯೋಪಾಧ್ಯಾಯರಾದ ಶ್ರೀಮತಿ ವೀರಮ್ಮ. ಎಂ.ಎಸ್. ಹಾಗೂ ಸುರೇಶ್ ನಾಯ್ಕ್ ಜಿ. ಇವರು ವೇದಿಕೆಯನ್ನು ಅಲಂಕರಿಸಿದ್ದರು. ಕಾರ್ಯಕ್ರಮದಲ್ಲಿ ಎಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಹಾಗೂ ಎಲ್ಲಾ ಗಣ್ಯರು ಮಕ್ಕಳಿಗೆ ಶಿಕ್ಷಣದ ಜ್ಞಾನ ಎಷ್ಟು ಇದೆ ಎನ್ನುವುದನ್ನು ಮನವರಿಕೆ ಮಾಡಿಕೊಡಲಾಯಿತು.



ಸಂಜೆ ಸರಿಯಾಗಿ ೬ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶಾಲೆಯ ಎಲ್ಲಾ ಶಿಕ್ಷಕರು ತಮ್ಮ ಸಾಂಸ್ಕೃತಿಕ ವಿಭಾಗದಲ್ಲಿರುವ ವಿದ್ಯಾರ್ಥಿಗಳಿಗೆ ವೇದಿಕೆ ಕಲ್ಪಸಿ ಅವರ ನೃತ್ಯ ಪ್ರದರ್ಶನ ನಡೆಸಲಾಯಿತು. ಒಟ್ಟು ೧೪ ಸಾಂಸ್ಕೃತಿಕ ಕಾರ್ಯಕ್ರಮಗಳು ಇದ್ದು ಅವುಗಳನ್ನು ವೀಕ್ಷಿಸಿ ಎಲ್ಲರೂ ಸಂತೋಷ ಪಟ್ಟರು. ಭಾಗವಹಿಸಿದ ಮಕ್ಕಳಿಗೆ ಅವರ ಪ್ರತಿಭೆ ಪ್ರದರ್ಶನಕ್ಕೆ ಅವಕಾಶ ಸಿಕ್ಕಂತಾಯಿತು. ಕಾರ್ಯಕ್ರಮ ಮುಗಿಸಿಕೊಂಡು ಎಲ್ಲರೂ ಸಂತಸದಿಂದ ಮನೆಗೆ ತೆರಳಿದರು.

# ಗುರುಬಸಮ್ಮ ಪ್ರೌಢಶಾಲೆಯ ಶಾಲೆಯ ಶೈಕ್ಷಣಿಕ ಪ್ರವಾಸ



ದಿನಾಂಕ ೨೪/೧೨/೨೦೨೫ ರಿಂದ ೨೬/೧೨/೨೦೨೫ರ ವರೆಗೆ ಮೂರು ದಿನಗಳ ಗುರುಬಸಮ್ಮ ವಿ. ಚಿಗಟೇರಿ ಆಂಗ್ಲಮಾಧ್ಯಮದಿಂದ ಶೈಕ್ಷಣಿಕ ಪ್ರವಾಸ ಕೈಗೊಳ್ಳಲಾಗಿತ್ತು. ಈ ಪ್ರವಾಸದಲ್ಲಿ ಮಕ್ಕಳು ಮತ್ತು ಶಿಕ್ಷಕರು ಭಾಗವಹಿಸಿದ್ದರು. ಮೊದಲ ದಿನ ಮೊದಲಿಗೆ ಸಹಸ್ರಲಿಂಗಕ್ಕೆ ಸರಿಸುಮಾರು ಬೆಳಿಗ್ಗೆ ೦೬ಗಂಟೆಗೆ ಹೋದೆವು. ಅಲ್ಲಿ ನಾವು ಶುಚಿರ್ ಭೂತರಾಗಿ ಬೆಳಗಿನ ಉಪಹಾರ ಸೇವಿಸಿ ನದಿ ಹತ್ತಿರ ಮತ್ತು ತೂಗೂಯ್ಯಾಲೆ ನೋಡಿಕೊಂಡು ಸಿರಸಿ ಮಾರಿಕಾಂಬ ದೇವಸ್ಥಾನಕ್ಕೆ ಬಂದೆವು. ಅಲ್ಲಿ ಮಾರಿಕಾಂಬೆಯ ದರ್ಶನ ಮುಗಿಸಿ ಹೊನ್ನಾವರಕ್ಕೆ ಬಂದೆವು. ಕಾಂಡ್ಲಾ ಬೋಟಿಂಗ್ ಮುಗಿಸಿಕೊಂಡು ಅಲ್ಲೇ ಊಟ ಮಾಡಿದೆವು ನಾವು ನಿಗದಿಮಾಡಿದ ಬಸ್‌ನವರು ಊಟದ ವ್ಯವಸ್ಥೆ ಮಾಡಿದರು. ನಂತರ ಇಕೋ ಬೀಚ್‌ಗೆ ಹೋದೆವು. ಅಲ್ಲಿ ಸಹ ಬೀಚ್‌ನ ಸೌಂದರ್ಯವನ್ನು ನೋಡಿ ಇಡುಗುಂಜಿ ಗಣೇಶನ ದರ್ಶನ ಮಾಡಲು ಹೋದೆವು ಅಲ್ಲಿ ಬಸ್‌ನಿಂದ ಇಳಿದು ದೇವಸ್ಥಾನಕ್ಕೆ ಹೋಗಿ ದರ್ಶನ ಮಾಡಿ ಬಂದೆವು. ರಾತ್ರಿ ಮುರುಡೇಶ್ವರಕ್ಕೆ ಅಲ್ಲಿ ನಿಗದಿಪಡಿಸಿದ್ದ ಹೋಟೆಲ್

ಒಂದರಲ್ಲಿ ತಂಗಿದ್ದೆವು. ಬೆಳಿಗ್ಗೆ ಎದ್ದು ನಿತ್ಯ ಕರ್ಮಗಳನ್ನು ಮುಗಿಸಿ ಬೆಳಗಿನ ಉಪಹಾರ ಮುಗಿಸಿ ಮುರುಡೇಶನ ದರ್ಶನ ಮಾಡಿ ಮುಂದಿನ ಪ್ರದೇಶವಾದ ಆನೆಗುಡ್ಡೆ ಗಣೇಶನ ದರ್ಶನಕ್ಕೆ ಹೋದೆವು. ಅಲ್ಲಿಯ ದರ್ಶನ ಮುಗಿಸಿಕೊಂಡು, ಮಲ್ಪೆ ಬೀಚ್‌ಗೆ ಹೋಗಿ ಸಮುದ್ರ ತೀರದ ಸೌಂದರ್ಯವನ್ನು ನೋಡಿ ಮುಂದಿನ ಪ್ರದೇಶವಾದ ಮಣಿಪಾಲ್‌ನಲ್ಲಿರುವ ಬಯಾಲಾಜಿಕಲ್ ಮ್ಯೂಜಿಯಂಗೆ ಹೋದೆವು. ಅಲ್ಲಿಯ ಒಂದೊಂದು ವಿಶೇಷ ಜೀವಿಗಳ ಪ್ರಬೇದವನ್ನು ನೋಡಿ ಆಶ್ಚರ್ಯಚಕಿತರಾದರು. ಉಡುಪಿಯಲ್ಲಿ ಶ್ರೀ ಕೃಷ್ಣನ ಅದನ್ನು ನೋಡಿ ಅಲ್ಲೇ ಬೆಳಗಿನ ಉಪಹಾರ ಮುಗಿಸಿಕೊಂಡು ನಂತರ ಮಂಗಳೂರಿನ ಪಿಳಿಕುಳದ ವಿಜ್ಞಾನ ಕೇಂದ್ರಕ್ಕೆ ಹೋದೆವು. ಅಲ್ಲಿ ಮೋಜಿನ ವಿಜ್ಞಾನ ದಿಂದ ಹಿಡಿದು ಹಲವು ವಿಜ್ಞಾನದ ಮಾದರಿಗಳನ್ನು ನೋಡಿ ಆಶ್ಚರ್ಯಚಕಿತಗೊಂಡರು ಹಾಗೆಯೇ ಅಲ್ಲಿ ಅನೇಕ ಭಾವಚಿತ್ರಗಳನ್ನು ತೆಗೆದುಕೊಂಡು ನಂತರ ಪ್ರಾಣಿಸಂಗ್ರಹಾಲಯ, ಮ್ಯೂಜಿಯಂ, ಮಧ್ಯಾಹ್ನದ ಊಟ ಮುಗಿಸಿಕೊಂಡು ಬಟಾನಿಕಲ್ ಪಾರ್ಕ್. ಗುತ್ತುಮನೆ ನೋಡಿಕೊಂಡು ಗೋಕರ್ಣೆಶ್ವರ ದೇವಸ್ಥಾನಕ್ಕೆ ಬಂದು ಅಲ್ಲಿ ಸಹ ಗೋಲ್ಡನ್ ಟೆಂಪಲ್ ಎಂದೇ ಕರೆಯುವ ಗೋಕರ್ಣೆಶ್ವರನ ದೇವಸ್ಥಾನ ಮತ್ತು ಅದರ ಸುತ್ತಲೂ ಇರುವ ಅನೇಕ ದೇವಸ್ಥಾನಗಳನ್ನು ನೋಡಿ ನಂತರ ಅಲ್ಲಿಂದ ಕಟೀಲು ದುರ್ಗಾ ಪರಮೇಶ್ವರಿ ದೇವಸ್ಥಾನಕ್ಕೆ ಬಂದೆವು. ಅಲ್ಲಿ ದೇವರ ದರ್ಶನ ಮಾಡಿ ಮಕ್ಕಳಿಗೆ ಶಾಪಿಂಗ್ ಮಾಡಲು ಹೇಳಿದೆವು. ಮಕ್ಕಳೆಲ್ಲರೂ ಸಹ ಖುಷಿಯಿಂದ ಶಾಪಿಂಗ್ ಮಾಡಿ ನಂತರ ಅಲ್ಲೇ ಊಟ ಮುಗಿಸಿ ವಾಪಾಸ್ಸು ದಾವಣಗೆರೆಗೆ ಬಂದೆವು. ಸರಿಸುಮಾರು ಬೆಳಿಗ್ಗೆ ೦೬ಕ್ಕೆ ದಾವಣಗೆರೆಗೆ ವಾಪಾಸ್ ಬಂದೆವು.

## ಗುರುಬಸಮ್ಮ ಪ್ರೌಢಶಾಲೆಯ ವಿದ್ಯಾರ್ಥಿ ರಂಗೋಲಿ ರಾಜ್ಯ ಮಟ್ಟಕ್ಕೆ ಆಯ್ಕೆ



ದಿನಾಂಕ: ೨೭/೧೨/೨೦೨೫ರಂದು ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ನಮ್ಮ ಶಾಲೆಯಿಂದ ಭಾಗವಹಿಸಿ ಕುಮಾರಿ ಧನುಶ್ರೀ ಇವರು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆ ಯಾಗಿದ್ದಾಳೆ ಇವರಿಗೆ ಶಾಲಾ ಮುಖ್ಯಸ್ಥರು ಶಿಕ್ಷಕರು, ಶೈಕ್ಷಣಿಕ ಸಲಹೆಗಾರರು, ಹಾಗೂ ಶಾಲಾ ಆಡಳಿತ ಮಂಡಳಿಯವರು ಶುಭ ಹಾರೈಸಿದ್ದಾರೆ. ಹಾಗೆಯೇ ಮುಂದಿನ ರಾಜ್ಯ ಮಟ್ಟದಲ್ಲೂ ಸಹ ಬಹುಮಾನ ಪಡೆಯಲೆಂದು ಶುಭಹಾರೈಸಿದ್ದಾರೆ.

## ಗುರುಬಸಮ್ಮ ಶಾಲೆಯ ಕುಮಾರಿ ಲಾವಣ್ಯ ಭರತನಾಟ್ಯದಲ್ಲಿ ಪ್ರಥಮ ಬಹುಮಾನ







ದಿನಾಂಕ ೦೪/೦೧/೨೦೨೬ರಂದು ನಡೆದ ಶ್ರೀಗಂಧ ಟ್ರಸ್ಟ್ ದಾವಣಗೆರೆ ವತಿಯಿಂದ ನಡೆದ ದಾವಣಗೆರೆ ಜಿಲ್ಲಾ ೩ & ೪ ಚಕ್ರ ಗೂಡ್ಸ್ ವಾಹನ ಚಾಲಕರ ಸಂಘ ಮತ್ತು ಮಾಲೀಕರ ಸಂಘದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಮತ್ತು ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗಾಗಿ ಹಲವು ಸ್ಪರ್ಧೆಗಳನ್ನು ನಡೆಸಲಾಗಿತ್ತು. ಅದರಲ್ಲಿ ನಮ್ಮ ಶಾಲೆಯಿಂದ ಕು. ಲಾವಣ್ಯ ಎಂ.ಎ ಭಾಗವಹಿಸಿ ಪ್ರಥಮ ಬಹುಮಾನ ಪಡೆದಿರುತ್ತಾಳೆ ಇವಳಿಗೆ ಶಾಲೆಯ ಪರವಾಗಿ ಮತ್ತು ಶಾಲಾ ಆಡಳಿತ ಮಂಡಳಿ ಪರವಾಗಿ ಶುಭಹಾರೈಸಿದ್ದಾರೆ.

# ಮರೆಯಲಾಗದ ಮಾಣಿಕ್ಯ... ಡಾಕ್ಟರೇಟ್ ಪುರಸ್ಕೃತರು ಶಿವಶಂಕರಪ್ಪಾಜಿ, ಒಂದು ನೆನಪು......



" ಅನ್ನದಾತೋ ಸುಖಿಭವ".... ದಾವಣಗೆರೆ ನಗರದ ಜೀವನಾಡಿ ಎಂದರೆ, ಅದುವೇ Dr. ಶಾಮನೂರ್ ಶಿವಶಂಕರಪ್ಪಾಜಿ ಎಂದೇ ಜನಮಾನಸದಲ್ಲಿ ಬೆರೆತು ಹೋಗಿದ್ದಾರೆ. ಇಂದು ಇವರು ಸಾವಿರಾರು ಕುಟುಂಬಗಳ ನಿರ್ವಾಹಕರು ಎಂದರೆ ತಪ್ಪಾಗಲಾರದು.

ದಾವಣಗೆರೆ ನಗರದ ಪ್ರತಿಷ್ಠಿತ ಸಂಸ್ಥೆಯಾದ ಬಾಪೂಜಿ ವಿದ್ಯಾ ಸಂಸ್ಥೆ ಯ ಗೌರವ ಕಾರ್ಯದರ್ಶಿಯಾಗಿ ( 1972-2025) ಸುಮಾರು. 53ವರ್ಷಗಳ ಸುದೀರ್ಘ ಕಾಲ ಸಂಸ್ಥೆ ಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿರುವುದು ನಮ್ಮ ಭಾಗ್ಯವೇ ಸರಿ. ದಾವಣಗೆರೆ ನಗರವನ್ನು ತಾಲ್ಲೂಕ್ ಮಟ್ಟದಿಂದ, ರಾಷ್ಟ್ರ ಮಟ್ಟದವರಿಗೆ ಪ್ರಸಿದ್ದಿ ಮಾಡಿದ್ದು ಇವರ ಹೆಗ್ಗಳ್ಳಿಕೆ.

.ದಾವಣಗೆರೆ ಜಿಲ್ಲೆ ಯಲ್ಲಿ ಒಂದು ಪುಟ್ಟ ಭಾರತ ನಿರ್ಮಾಣ ಗೊಳ್ಳಲು ಇವರ ಉನ್ನತ ಶಿಕ್ಷಣ ಸಂಸ್ಥೆ ಭಾಜಾನವಾಗಿದೆ. ಬಹುತೇಕ ಎಲ್ಲಾ ರಾಜ್ಯದ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಳಿ ಶಿಕ್ಷಣ ಪಡೆಯುತ್ತಿರುವದು ಹೆಮ್ಮೆಯ ಸಂಗತಿ.ಇತ್ತೀಚೆಗೆ ಬಾಪೂಜಿ ಸಂಸ್ಥೆ ಮತ್ತೆರಡು ಹೊಸ ಶಿಕ್ಷಣ ಕೋರ್ಸ್ ನ್ನು ಪರಿಚಯಿಸಿದ್ದು ಸಂಸ್ಥೆ ಯು ಕಿರೀಟಕ್ಕೆ ಬಂಗಾರದ ಗರಿ ಇಟ್ಟಂತೆ.. ಅಲ್ಲದೆ ರಾಜಕೀಯ ರಂಗದಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವುದು ಜನ ಸೇವೆ ಮತ್ತು ಸಮಾಜಸೇವೆಗೆ ಸಾಕ್ಷಿಯಾಗಿದ್ದಾರೆ.

.ಕೋವಿಡ್ ಸಂದರ್ಭದಲ್ಲಿ ಪಣತೊಟ್ಟು ಉಚಿತ ಲಸಿಕೆ ಸರಬರಾಜು, ಬಡ ರೋಗಿಗಳಿಗೆ ಉಚಿತ ಡಯಲಿಸಿಸ್, ಉಚಿತ ಆಹಾರ ದ ಕಿಟ್, ಆಮ್ಲಜನಕ ಘಟಕ ಸ್ಥಾಪನೆ, ಅಲ್ಲದೆ ಸಂಸ್ಥೆ ಯ ನೌಕರರಿಗೆ ಕೋವಿಡ್ ಸಮಯದಲ್ಲಿ ವೇತನ ವನ್ನೂ ನಿಲ್ಲಿಸದೆ ಅವರಿಗೆ ನೀಡಿದ್ದು ಒಂದು ದಾಖಲೆ ಯಾಗಿ ಉಳಿದಿದೆ.ವ್ಯಾಪಾರ, ವಾಣಿಜ್ಯದಲ್ಲಿ ಅಪಾರವಾದ ಅನುಭವ ಅಪ್ಪಾಜಿ ಅವರಿಗೆ. ಶಿಕ್ಷಣದ ಜೊತೆ ಜೊತೆಗೆ ಕೈಗಾರಿಕೆಗಳನ್ನು ಅಭೀವೃದ್ಧಿ ಪಡಿಸಲು ಸಕ್ಕರೆ ಕಾರ್ಖಾನೆ, ಅಕ್ಕಿ ಮಿಲ್, ದಾಲ್ ಮಿಲ್ ಗಳನ್ನು ಸ್ಥಾಪಿಸಿ ನಿರುದ್ಯೋಗವನ್ನು ಹೋಗಲಾಡಿಸಿ ಸಮಾಜದ, ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಮಾಡುತ್ತಾ ಜನರ
ಆರ್ಥಿಕತೆಯನ್ನು ಸದೃಢ.ಪಡಿಸಿದ್ದರು.ಅಪ್ಪಾಜಿಯವರ ಇಂತಹ ಗೋವರ್ಧನ ಗಿರಿಯಷ್ಟು ಕೊಡುಗೆಗಳನ್ನು ಕೊಟ್ಟು, ಅತಿರಥ ಮಾನವ ನೆನಪಿಸಿದ್ದಾರೆ. ಅವರ ಅಗಾಧವಾದ ನೆನಪಿನ ಶಕ್ತಿ , ಸುಖೀ ಹಾಗೂ ಬಲವಾದ ಕುಟುಂಬದ ಒಗ್ಗಟ್ಟು ಅವರನ್ನು ಸಾಧಕರನ್ನಾಗಿ ಮಾಡಿದೆ. ಬಡವ ಬಲ್ಲಿದವರಿಗೆ ಸ್ಪಂದಿಸುವ.

ಹೃದಯ ವಿಶಾಲತೆಯಿರುವ ಮಹನೀಯರು, ಇವರು ಅಜಾತಶತ್ರು. ಇವರು ದಾನ ಮಾಡದ ಸಂಸ್ಥೆಯಿಲ್ಲ ಎಲ್ಲೆಡೆ ಚಿರಪರಿಚಿತರಾದ ದಾನಿಗಳು. 95ರ ಹರೆಯದಲ್ಲೂ ಅವರ ಜೀವನದ ಉತ್ಸಹವನ್ನು ಮರೆಯುವ ಹಾಗಿಲ್ಲ. ಅಪ್ಪಾಜಿ ಯವರು ನಗರದ ಅನರ್ಘ್ಯ ರತ್ನ ಅವರು ಸಮಾಜಕ್ಕೆ, ದೇಶಕ್ಕೆ, ಮನುಕುಲಕ್ಕೆ ನೀಡಿದ ಸೇವೆ ಅಮೂಲ್ಯವಾದಂತಹದು. ಬನ್ನಿ ಆಕಾಶದಲ್ಲಿ ನಕ್ಷತ್ರ ವಾಗಿ ಮಿನುಗುತ್ತಾ ನಮ್ಮನೆಲ್ಲಾ ಆಶಿರ್ವಾದಿಸಲಿ ಅವರ ಮಾರ್ಗದಲ್ಲಿ ನಮ್ಮ ಹೆಜ್ಜೆ ಗುರುತನ್ನು ಮೂಡಿಸೋಣ ಮರೆಯದ ಮಾಣಿಕ್ಯರಾದ ಹಿರಿಯರಿಗೆ ತುಂಬು ಹೃದಯದ ನಮನಗಳು.... ಮತ್ತೆ ಹುಟ್ಟಿ ಬನ್ನಿ ಅಪ್ಪಾಜಿ.....

ಲೇಖಕರು : ಮಂಜುಳಾ. ಬಿ. ಸಂಗಮೇಶ, ದಾವಣಗೆರೆ.

# ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ಹಾಗೂ ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ ಶೈಕ್ಷಣಿಕ ಪ್ರವಾಸ







ದಿನಾಂಕ 26 27 28ರ ಡಿಸೆಂಬರ್ 2025 ರಂದು ಮೂರು ದಿನಗಳ ಶೈಕ್ಷಣಿಕ ಪ್ರವಾಸವನ್ನು ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ವತಿಯಿಂದ ಎರಡು ಬಸ್ಸುಗಳಲ್ಲಿ ಶೈಕ್ಷಣಿಕ ಪ್ರವಾಸವನ್ನು ಮಾಡಿದೆವು. ಪ್ರಮುಖ ಸ್ಥಳಗಳಾದ ಕುಪ್ಪಳ್ಳಿ,ಶೃಂಗೇರಿ,ಧರ್ಮಸ್ಥಳ, ಉಡುಪಿ ಹಾಗೂ ವಿಜ್ಞಾನ ಕೇಂದ್ರವಾದ ಪಿಳುಕುಳ ಸೈನ್ಸ್ ಸೆಂಟರ್ ಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ವಿಜ್ಞಾನದ ವಿವಿಧ ಮಾದರಿಗಳನ್ನು ತೋರಿಸಿ ಅವುಗಳ ಬಗ್ಗೆ ಮಾಹಿತಿ ನೀಡಲಾಯಿತು. 90 ಮಕ್ಕಳು ಪ್ರವಾಸದಲ್ಲಿ ಭಾಗವಹಿಸಿದ್ದರು.ಎಲ್ಲ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸುರಕ್ಷಿತವಾಗಿ ಪ್ರವಾಸವನ್ನು ಮುಗಿಸಿಕೊಂಡು ಬಂದೆವು ..



ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ಆಂಗ್ಲ ಮಾಧ್ಯಮದ ಆರನೇ ತರಗತಿಯ ವಿದ್ಯಾರ್ಥಿಗಳು ನೈಸರ್ಗಿಕ ಸಂಪನ್ಮೂಲಗಳು ಪಾಠದ ಬಗ್ಗೆ ವಿದ್ಯುತ್ ಉತ್ಪಾದಿಸುವ ಗಾಳಿ ಯಂತ್ರದ ಮಾದರಿಗಳನ್ನು ತಯಾರಿಸಿದರು

ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ನರ್ಸರಿ ಶಾಲೆಯ ವಿದ್ಯಾರ್ಥಿಗಳಿಂದ ಪ್ರಥಮ ಮಹಿಳಾ ಶಿಕ್ಷಕಿ ಶ್ರೀಮತಿ ಸಾವಿತ್ರಬಾಯಿ ಪುಲೆಯವರ ಜಯಂತಿಯನ್ನು ದಿನಾಂಕ 3 01.2025ರಂದು ಆಚರಿಸಲಾಯಿತು



# GVC ಪ್ರಾಥಮಿಕ ಶಾಲೆ ಆಂಗ್ಲಮಾಧ್ಯಮದ  ಹೊರ ಸಂಚಾರ



ದಿನಾಂಕ೦೫/೦೧/೨೦೨೬ ರಂದು ಬಾತಿಯಲ್ಲಿ ಡಿ.ಜಿ.ಅರ್. ವಾಟರ್ ಪಾರ್ಕ್‌ಗೆ ಒಂದು ದಿನದ ಹೊರಸಂಚಾರಕ್ಕೆ ಕರೆದುಕೊಂಡು ಹೋಗಲಾಗಿತ್ತು. ಮಕ್ಕಳು ಸಂಭ್ರಮದಿಂದ ಆ ಪಾರ್ಕ್‌ನಲ್ಲಿ ಡ್ರೈ ಗೇಮ್ಸ್ ಮತ್ತು ವಾಟರ್ ಗೇಮ್ಸ್ ಗಳನ್ನು ಆಡಿ ಸಂತೋಷಪಟ್ಟರು ಅದಲ್ಲದೇ ಪಾರ್ಕ್ ವತಿಯಿಂದ ಬೆಳಗಿನ ಉಪಹಾರ, ಮಧ್ಯಾಹ್ನದ ಊಟ ಹಾಗೂ ಸಂಜೆಯ ಲಘು ಉಪಹಾರಗಳನ್ನು ಸಹ ನೀಡಲಾಗಿತ್ತು ಮಕ್ಕಳು ನೀರಿನೊಂದಿಗೆ ಆಟ ಆಡುವುದರ ಮೂಲಕ ಶಿಕ್ಷಕರ ಜೊತೆ ಸಂತಸದಿಂದ ಒಂದು ದಿನದ ಹೊರಸಂಚಾರದ ಅನುಭವ ಪಡೆದುಕೊಂಡರು.

# ಶ್ರೀಮತಿ ಅರುಂಧತಿ ರಮೇಶ್ ಅವರಿಗೆ ಸಂತಾಪ ಸೂಚನೆ



ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಅಕ್ಕಮಹಾದೇವಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿ ಹಾಗೂ ಶಿಕ್ಷಕಿಯಾಗಿ ಮತ್ತು ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ, ಶ್ರೀಮತಿ ಅರುಂಧತಿ ರಮೇಶ್‌ರವರು ದಿನಾಂಕ ೧೧/೧/೨೦೨೬ರ ಭಾನುವಾರ ನಿಧನರಾಗಿದ್ದರು. ಇವರ ಆತ್ಮಕ್ಕೆ ಶಾಂತಿ ಕೋರಿ ಸಂಸ್ಥೆಯ ಎನ್. ಆರ್. ರಸ್ತೆ ಕ್ಯಾಂಪಸ್‌ನಲ್ಲಿನ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಶಿಕ್ಷಕ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಂದು ನಿಮಿಷ ಮೌನ ಆಚರಣೆ ಮಾಡಲಾಯಿತು.

# ನಯನಕ್ಕೆ ಕಣ್ಮರೆಯಾದ ಮನದಲ್ಲಿ ಕಣ್ಮಣಿಸಿರುವ ನಕ್ಷತ್ರ



ಹೇಗೆ ಪ್ರಾರಂಭಿಸಬೇಕು ಹೇಗೆ ಮುಕ್ತಾಯ ಮಾಡಬೇಕು ಎಂಬುದು ಯಕ್ಷಪ್ರಶ್ನೆಯಾಗಿ ನನ್ನ ದೇಹದ ನರನಾಡಿಗಳಲ್ಲಿ ಪ್ರವಹಿಸುತ್ತಿರುವ ಪ್ರತಿಧ್ವನಿ ಗೆಳತಿ ಅರುಂಧತಿ.

ನಾನು 1970- 71ರಲ್ಲಿ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಯಲ್ಲಿ ನೇಮಕಗೊಂಡ ಎರಡೇ ವರ್ಷಗಳಲ್ಲಿ 1972- 73 ರಲ್ಲಿ ನಮ್ಮ ಸ್ನೇಹಿತೆ ಯಾಗಿ ಸಹೋದ್ಯೋಗಿಯಾಗಿ ಆಪ್ತ ಗೆಳತಿಯಾಗಿ ಅರುಂಧತಿಯ ಪ್ರವೇಶ.ವಿಜ್ಞಾನ ಗಣಿತ ಶಿಕ್ಷಕಿಯಾಗಿ ಅಂದಿನಿಂದ ಇಂದಿನವರೆಗೆ ನಮ್ಮ ಸ್ನೇಹ ಅಜರಾಮರ ಎರಡು ದೇಹ ಒಂದೇ ಉಸಿರು ಎಂಬಂತೆ ನಮ್ಮ ಒಡನಾಟ ಚಿರನೂತನ ನಮ್ಮ ಶಿಕ್ಷಕ ವೃತ್ತಿಇರಲಿ,ತರಗತಿ ಶಿಕ್ಷಕ ಸ್ಥಾನವಿರಲಿ , ಎಲ್ಲದರಲ್ಲೂ ಜೊತೆಯೇ ನಿರ್ಮಿಸಿಕೊಂಡು ನಾವಿಬ್ಬರು ಜೊತೆಯಲ್ಲೇ ಇರುವಂತೆ ಅನುಕೂಲ ಮಾಡಿಕೊಂಡು ನಿರ್ವಹಣೆ ಮಾಡುತ್ತಿದ್ದೆವು. ಇನ್ನೂ ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಸಮಪಾಲು. ನಾಟಕ, ಸಾಮೂಹಿಕ ಗೀತೆಗಳನ್ನು ಮಕ್ಕಳಿಗೆ ಕಲಿಸುವ ಜವಾಬ್ದಾರಿಯ ಹಂಚಿಕೆ, ಶಾಲಾ ಪ್ರವಾಸದಲ್ಲೂ ವಿದ್ಯಾರ್ಥಿಗಳ ಗುಂಪನ್ನು ಸದಾ ಜೊತೆ ಜೊತೆಯಾಗಿ ನಿರ್ವಹಿಸುತ್ತಿದ್ದೆವು ನಮ್ಮಿಬ್ಬರ ಬೇರ್ಪಡಿಕೆ ಅನಿವಾರ್ಯ ಕೆಲವು ವರ್ಷಗಳವರೆಗೆ ಮಾತ್ರ ಆಗಿತ್ತು 4-5 ವರ್ಷಗಳಲ್ಲಿ ಅವಳ ವರ್ಗಾವಣೆ ನಾನಿರುವ ಶಾಲೆಗೆ ಆದಾಗ ಉಂಟಾದ ಆನಂದ ಅಷ್ಟಿಷ್ಟಲ್ಲ ನಮ್ಮಿಬ್ಬರ ಆತ್ಮೀಯತೆಗೆ ಕೊಡೊಂದು ಮೂಡಿದಂತಾಯಿತು ನಾನು ಮುಖ್ಯಶಿಕ್ಷಕಿಯಾಗಿ ಭರ್ತಿ ಪಡೆದರು ನಮ್ಮಿಬ್ಬರ ನಡುವೆ ಯಾವುದೇ ಪಕ್ಷಪಾತ ಧೋರಣೆಯು ಸುಳಿಯಲಿಲ್ಲ ನಾನು ರಜೆ ಹಾಕುವ ಸಂದರ್ಭದಲ್ಲಿ ಅವಳಿಗೆ ಕಾರ್ಯನಿರ್ವಹಿಸಿಕೊಟ್ಟಾಗ ಅದನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಳು. ನನ್ನ ಸೇವಾ ಅವಧಿಯಲ್ಲಿ ಅವಳಿಗೆ" ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ" ಪ್ರಶಸ್ತಿ ಬಂದಾಗ ಶಾಲಾ ಮಟ್ಟದಲ್ಲಿ ಅವಳನ್ನು ಸನ್ಮಾನಿಸುವ ಭಾಗ್ಯ ನನಗೆ ದೊರೆಯಿತು ನಮ್ಮಿಬ್ಬರ ನಿವೃತ್ತಿಯ ನಂತರ ಕೇವಲ ಮೂರು ತಿಂಗಳ ವೈವಾಹಿಕ ಜೀವನ ಅಂತರದಲ್ಲಿ ವಿವಾಹ 3-4 ತಿಂಗಳ ಅಂತರದಲ್ಲಿ ಇಬ್ಬರಿಗೂ ಪುತ್ರೋತ್ಸಾಹ ಮಧು, ಮಂಜು ಆಗಮನ ಮಕ್ಕಳ ಶಿಕ್ಷಣಕ್ಕೆ ಬಂದರೆ ಇಬ್ಬರು ಇಂಜಿನಿಯರ್ಸ್ ಪದವಿ ಮುಗಿಸಿ ವೃತ್ತಿ ಹುಡುಕಾಟಕ್ಕೆ ಬೆಂಗಳೂರಿಗೆ ಆಗಮನ. ನಾವುಗಳು ನಮ್ಮಿಬ್ಬರ ನಿವೃತ್ತ ನಂತರ ಬೆಂಗಳೂರಿನಲ್ಲಿ ಪುನಃ ಕಲೆತು ಕೇವಲ 30 ನಿಮಿಷಗಳಲ್ಲಿ ತಲುಪುವಂತಹ ಸ್ಥಳದಲ್ಲಿ ವಾಸ. ಜಂಗಮವಾಣಿಯ ಮೂಲಕ ಮಾತನಾಡುತ್ತಾ ಮನಸ್ಸು ಹರ್ಷಗಳೊಂದಿಗೆ ವೈಯಕ್ತಿಕ ಸಾಹಿತಿಕ ಸಂಭಾಷಣೆಗಳನ್ನು ನಡೆಸುತ್ತಿದ್ದೆವು. ಮಾತಾಪಿತೃಗಳ ಮುದ್ದಿನ ಮಗಳು ಬೇಬಿ ಎಂದೇ ಕರೆಸಿಕೊಳ್ಳುವ ಇವಳು ಜೀವನದಲ್ಲಿ ನಾನಾ ಕಷ್ಟ ಕಾರ್ಪಣ್ಯಗಳ ನಡುವೆ ಪತಿಯ ಅಕಾಲಿಕ ಸಾವಿನ ನೋವನ್ನು ನುಂಗಿಕೊಂಡು ಮಗುವನ್ನು ಸತ್ಪ್ರಜೆಯಾಗಿ ರೂಪಿಸಿದ್ದು ಅಸಾಧಾರಣ. ಇತ್ತೀಚೆಗೆ ನನ್ನ ಜೀವನದಲ್ಲಿ ಸಂಭವಿಸಿದ ನನ್ನ ಪತಿಯ ಮರಣದ ಸಂದರ್ಭದಲ್ಲಿ ತನಗೆ ಅನಾರೋಗ್ಯ ಕಾಡುತ್ತಿದ್ದರು ಲೆಕ್ಕಿಸದೆ ನನ್ನ ಬಳಿ ಬಂದು ನಮ್ಮವರ ಅಂತಿಮ ದರ್ಶನ ಪಡೆದ ನನಗೆ ಸಾಂತ್ವಾನ ನೀಡಿದ ಅವಳ ಸ್ನೇಹಕ್ಕೆ ಬೆಲೆ ಕಟ್ಟಲು ಸಾಧ್ಯವೇ? ಸಾಹಿತ್ಯ ಲೋಕಕ್ಕೆ ಬಂದರೆ ಅತ್ಯಂತ ಉನ್ನತ ಉತ್ತುಂಗದ ಶಿಖರವನ್ನು ಏರಿರುವ ಕಥೆ ಕವನಗಳ ಒಡತಿ. ಪ್ರತಿಭಾನ್ವಿತ ನಕ್ಷತ್ರವೇ ಅವಳ ಭಾಷಾ ಪಾಂಡಿತ್ಯ ಕಲ್ಪನಾ ಶಕ್ತಿ ಎಲ್ಲವೂ ಸಮೃದ್ಧವೇ ಇದು ವರ್ಣಿಸಲು ಕೈಗೆಟಕುವಂತದ್ದಲ್ಲ. ಸಾಹಿತ್ಯ ಪ್ರಪಂಚಕ್ಕೆ ಇಷ್ಟೆಲ್ಲ ಕೊಡುಗೆ ನೀಡಿ ಇದರ ಮೂಲಕ ಜನರ ಸಾಮಾಜಿಕ ಕಳಕಳಿಗೆ ನೆರವು ನೀಡುವುದಲ್ಲದೆ ತನ್ನ ನಂತರ ತನ್ನ ಕಾಯವು ವೈದ್ಯಕೀಯ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಲಿ ಎಂಬ ಉದ್ದೇಶದಿಂದ ಸಾವಿನಲ್ಲು ದೇಹದಾನ ಮಾಡಿರುವ ಇವಳ ಔಚಿತ್ಯವನ್ನು ಏನೆಂದು ಹೇಳಲಿ?

ಇಂತಿ ಸದಾ ಅವಳ ನೆನಪಿನಲ್ಲಿ ಜೀವಿಸುವ, ಜೀವಿಸಲು ಬಯಸುವ ಗೆಳತಿ

**ರತ್ನ ಕೆಜಿ**

**ನಿವೃತ್ತ ಮುಖ್ಯೋಪಾಧ್ಯಾಯನಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ**

# ಶಿವಣ್ಣ ಚಿಗಟೇರಿ ನರ್ಸರಿ ಮಕ್ಕಳ ಚಟುವಟಿಕೆಗಳ ಚಿತ್ರಪಟಗಳು









